**ಸಾಕ್ಷಿಯನ್ನು ದಿಃ 31.01.2023 ರಂದು ಕರೆಸಿ ಪ್ರಮಾಣ ಬೋಧಿಸಲಾಯಿತು.**

ಪಾಟೀ ಸವಾಲುಃ 2 ನೇ ಪ್ರತಿವಾದಿಯ ಪರವಾಗಿ ಶ್ರೀ ಕೆ.ಪಿ.ಎಂ ವಕೀಲರಿಂದಃ

ಪಾಪಯ್ಯರವರಿಗೆ ನಾರಾಯಣಮ್ಮರವರು ಪತ್ನಿ ಎಂದರೆ ಸರಿ. ನಾರಾಯಣಮ್ಮರವರಿಗೆ 7 ಜನ ಮಕ್ಕಳು. ನಾರಾಯಣಮ್ಮ ಮತ್ತು ಪಾಪಯ್ಯರವರು ಕೆರೆಕೋಡಿ ಗ್ರಾಮದಲ್ಲಿ ವಾಸ ಇದ್ದರು ಎಂದರೆ ಸರಿ. ನಾರಾಯಣಮ್ಮರವರ ಮಕ್ಕಳನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಸೇರ್ಪಡೆ ಮಾಡಿರುತ್ತೇವೆ. ನಾರಾಯಣಮ್ಮರವರು ಮೃತಪಟ್ಟಾಗ ಅವರಿಗೆ ಸುಮಾರು 50 ವರ್ಷ ವಯಸ್ಸಾಗಿತ್ತು. ನಾನು ನಾರಾಯಣಮ್ಮರವರನ್ನು ನೋಡಿರುತ್ತೇನೆ. ನನ್ನ ತಾಯಿ ಹೆಸರು ಗೌರಮ್ಮ. ಪಾಪಯ್ಯರವರು ನಾರಾಯಣಮ್ಮ ಮತ್ತು ಮಕ್ಕಳನ್ನು ಬಿಟ್ಟು ಹೋಗಿದ್ದರು ಎಂದರೆ ಸರಿಯಲ್ಲ. ಪಾಪಯ್ಯರವರು ಮೃತಪಟ್ಟಾಗ ಅವರ ಜೊತೆ ನಾರಾಯಣಮ್ಮರವರ ಮಕ್ಕಳು ಇರಲಿಲ್ಲ.

ನನ್ನ ತಾಯಿ ಗೌರಮ್ಮರವರು ಪಾಪಯ್ಯರವರನ್ನು ಯಾವಾಗ ವಿವಾಹವಾಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿ ವಿವಾಹವಾದ ದಿನಾಂಕ ಮತ್ತು ಸ್ಥಳ ನನಗೆ ಗೊತ್ತಿರುವುದಿಲ್ಲ. ಈ ವಿಚಾರವನ್ನು ನಾನು ವಾದ ಪತ್ರದಲ್ಲಿ ತಿಳಿಸಿಲ್ಲ. 1 ನೇ ಪ್ರತಿವಾದಿಯು ಬಿ.ಇ.ಎಂಎಲ್ ನಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿ ಬೇತಮಂಗಲದಲ್ಲಿ ವಾಸ ಇರುತ್ತಾರೆ. 1 ನೇ ಪ್ರತಿವಾದಿ ಇಲ್ಲದೆ ಇರುವುದರಿಂದ 2 ನೇ ಪ್ರತಿವಾದಿ ದಾವಾ ಸ್ವತ್ತುಗಳನ್ನು ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿ. 2 ನೇ ಪ್ರತಿವಾದಿಯು ದಾವಾ ಸರ್ವೇನಂಬರ್ 94/1 ರಲ್ಲಿ ಒಂದು ಮನೆ ಕಟ್ಟಿಕೊಂಡು ವಾಸ ಆಗಿರುತ್ತಾರೆ. 2 ನೇ ಪ್ರತಿವಾದಿಯು ಸ್ವಲ್ಪ ವರ್ಷಗಳ ಕಾಲ ಸರ್ವೇನಂಬರ್ 94/1 ರಲ್ಲಿ ಬರುವ ಪಂಪ್ ಹೌಸ್ ನಲ್ಲಿ ವಾಸ ಇದ್ದರು. 2 ನೇ ಪ್ರತಿವಾದಿಯು ಬಂಗಾರಪೇಟೆಯಲ್ಲಿ ಸಹ ವಾಸವಾಗಿದ್ದರು. 2 ನೇ ಪ್ರತಿವಾದಿಯು ಪಂಪ್ ಹೌಸ್ ನಲ್ಲಿ ನನಗೆ 20 ವರ್ಷ ವಯಸ್ಸಾಗಿದ್ದಾಗ ವಾಸಕ್ಕೆ ಹೋದರು. ಈಗ ನನಗೆ 50 ವರ್ಷ. ಈಗ್ಗೆ 10 ವರ್ಷಗಳ ಹಿಂದೆ 2 ನೇ ಪ್ರತಿವಾದಿ ಸದರಿ ಸ್ವತ್ತಿನಲ್ಲಿ ಹೊಸ ಮನೆ ಕಟ್ಟಿಕೊಂಡು ವಾಸ ಇರುತ್ತಾರೆ. ನಾನು ಮತ್ತು ಉಳಿದ ಪಕ್ಷಗಾರರು ಸದರಿ

ಮನೆಯನ್ನು ಕಟ್ಟದಂತೆ ಯಾವುದೇ ತಕರಾರು ಮಾಡಿಲ್ಲ ಮತ್ತು ಯಾವುದೇ ಪ್ರಕರಣ ದಾಖಲಿಸಿಲ್ಲ.

2015 ಕ್ಕಿಂತ ಪೂರ್ವದಲ್ಲಿ ಪ್ರತಿವಾದಿ 1 ಮತ್ತು 2 ರವರು ಅನ್ಯೋನ್ಯವಾಗಿ ಇದ್ದರು. 1 ನೇ ಪ್ರತಿವಾದಿಯ ಮಾತನ್ನು ಕೇಳಿ 2 ನೇ ಪ್ರತಿವಾದಿ ಪಂಪ್ ಹೌಸ್ ನಲ್ಲಿ ವಾಸ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ 3 ರಿಂದ 5 ರವರು ಈಗ ಬೇರೆ ಬೇರೆ ಕಡೆ ವಾಸ ಇರುತ್ತಾರೆ. ಪ್ರತಿವಾದಿ 3 ರವರು ಬೇತಮಂಗಲ, ಪ್ರತಿವಾದಿ 4 ರವರು ವಿಜಯಪುರ ಮತ್ತು ಪ್ರತಿವಾದಿ-5 ರವರು ಬಂಗಾರಪೇಟೆ ಟ್ಯಾಂಕ್ ರಸ್ತೆಯಲ್ಲಿ ವಾಸ ಇರುತ್ತಾರೆ. 2 ನೇ ಪ್ರತಿವಾದಿ ಬಂಗಾರಪೇಟೆಯ ಟ್ಯಾಂಕ್ ರಸ್ತೆಯಲ್ಲಿರುವ ಮನೆಯಲ್ಲಿ ಯಾವತ್ತು ವಾಸ ಇರಲಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ತನ್ನ 11 ನೇ ವಯಸ್ಸಿನಿಂದಲೂ ಪಂಪ್ ಹೌಸ್ ನಲ್ಲಿ ವಾಸ ಇದ್ದು ದುಡಿಮೆ ಮಾಡಿ ತನ್ನ ಸಹೋದರರನ್ನು ಓದಿಸಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ 5 ರವರು ಮಾತ್ರ ಕೆಲಸದಲ್ಲಿರುತ್ತಾರೆ ಉಳಿದವರಿಗೆ ಯಾವುದೇ ಕೆಲಸ ಇಲ್ಲ .

ದಾವಾ ಐಟಂ ನಂಬರ್ 1 ರಿಂದ 3 ರ ಸ್ವತ್ತುಗಳಲ್ಲಿ ಕಳೆದ 50 ವರ್ಷಗಳಿಂದ 2 ನೇ ಪ್ರತಿವಾದಿ ಸಾಗುವಳಿ ಮಾಡಿ ಸ್ವಾಧೀನ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ನಾನು ನನ್ನ ತಂದೆ ತಾಯಿ ಮೃತಪಟ್ಟ ನಂತರ ಈ ಪ್ರಕರಣವನ್ನು ಹೊರತುಪಡಿಸಿ ಬೇರೆ ಯಾವುದೇ ಪ್ರಕರಣವನ್ನು ಹೂಡಿರುವುದಿಲ್ಲ. 2 ನೇ ಪ್ರತಿವಾದಿಯು ಪಂಪ್ ಹೌಸ್ ನಲ್ಲಿ ವಾಸ ಇರುವ ಬಗ್ಗೆ ಆದಾರ್ ಕಾರ್ಡ್ ಮತ್ತು ಚುನಾವಣಾ ಗುರುತಿನ ಚೀಟಿ ಇರುತ್ತದೆ ಎಂದರೆ ಇರಬಹುದು ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ಈ ಪ್ರಕರಣದಲ್ಲಿ ಏನು ತಕರಾರು ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳನ್ನು ಪ್ರತಿವಾದಿ 1 ರಿಂದ 5 ರವರು ವಿಭಾಗ ಮಾಡಿಕೊಂಡು ಪ್ರತ್ಯೇಕ ವಾಸ ಇರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಬಿ.ಇ.ಎಂ.ಎಲ್ ನಲ್ಲಿ ಸಾಲ ಪಡೆದಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿ ಮತ್ತು ಅವರ ಸಹೋದರರು ದಿನಾಂಕ 15.12.1999 ರಲ್ಲಿ ನೊಂದಾಯಿತ ವಿಭಾಗ ಪತ್ರವನ್ನು ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಭಾಗ ಪತ್ರದ ಪ್ರಕಾರ ಖಾತೆ ಬದಲಾವಣೆಯಾಗಿ ಪಹಣಿಗಳು ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಭಾಗ ಪತ್ರವನ್ನು ರದ್ದುಪಡಿಸುವಂತೆ ನಾನು ಪರಿಹಾರ ಕೋರಿಲ್ಲ ಎಂದರೆ ಸರಿ. ಸದರಿ ವಿಭಾಗ ಪತ್ರದ

ಪ್ರಕಾರ ಖಾತೆ ಬದಲಾವಣೆಯಾಗಿ ಪಹಣಿ ಪತ್ರಿಕೆಗಳು ಪ್ರತ್ಯೇಕವಾಗಿ ಬರುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ನಮಗೆ ಗೊತ್ತಿಲ್ಲದಂತೆ ದಾಖಲಾತಿಗಳನ್ನು ಮಾಡಿಕೊಂಡಿರುತ್ತಾರೆ. ಪ್ರತಿವಾದಿಗಳ ಹೆಸರಿನಲ್ಲಿ ಪಹಣಿ ಇರುವುದನ್ನು ಪ್ರಶ್ನಿಸಿ ನಾವು ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ.

ಈ ಪ್ರಕರಣದ 2 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ವಿರುದ್ಧ ಕೆಜಿಎಫ್ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 44/2015 ರಂತೆ ದಾವೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣ 2 ನೇ ಪ್ರತಿವಾದಿಯ ಪರವಾಗಿ ಆದೇಶವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಯ ವಿರುದ್ಧ ಅಪರ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 116/2015 ರಂತೆ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾವು ನಮ್ಮ ಆಸ್ತಿಯನ್ನು ವಿಭಾಗ ಮಾಡಿಕೊಡುವಂತೆ ಕೇಳಿದೆವು ಅದಕ್ಕೆ ಅವರು ನಿರಾಕರಿಸಿದ್ದರಿಂದ ಈ ದಾವೆ ತಂದಿರುತ್ತೇವೆ. ನಾನು ಕೆ.ಸಿ.ನಾಗರಾಜ್ ರವರ ವಕೀಲರ ಮುಖಾಂತರ ಪ್ರಕರಣ ಸಲ್ಲಿಸಿರುತ್ತೇನೆ. ಈಗ ನನ್ನ ಪ್ರಕರಣವನ್ನು ಹರೀಶ್ ವಕೀಲರು ನೋಡಿಕೊಳ್ಳುತ್ತಿದ್ದಾರೆ. ನಾವು ಪ್ರತ್ಯೇಕವಾಗಿ ವಕೀಲರನ್ನು ಭೇಟಿ ಮಾಡಿ ಈ ಪ್ರಕರಣ ಸಲ್ಲಿಸಿರುತ್ತೇವೆ. ನಮ್ಮನ್ನು 1 ನೇ ಪ್ರತಿವಾದಿ ಕರೆದುಕೊಂಡು ಹೋಗಿಲ್ಲ. ನನಗೆ ಅಸಲು ದಾವಾ ಸಂಖ್ಯೆ 116/2015 ರ ಪ್ರಕರಣ ನಡೆಯುತ್ತಿರುವುದು ಗೊತ್ತಿಲ್ಲ.

ವಿಭಾಗ ಪತ್ರದಲ್ಲಿ 2 ನೇ ಪ್ರತಿವಾದಿಗೆ ಬಂದಿರುವ ಸ್ವತ್ತುಗಳನ್ನು ಪಡೆಯುವ ಸಲುವಾಗಿ ನಾವು ಮತ್ತು 1 ನೇ ಪ್ರತಿವಾದಿ ಸೇರಿ ಈ ದಾವೆ ತಂದಿರುತ್ತೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ದುರುದ್ದೇಶದಿಂದ ನಮ್ಮ ಮೂಲಕ ಈ ಪ್ರಕರಣ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ ಒಬ್ಬನೇ ಮಗ ಇರುತ್ತಾನೆ. ಪಂಪ್ ಹೌಸ್ ನಲ್ಲಿ ವಾಸ ಇದ್ದಲ್ಲಿ ಮಗನಿಗೆ ಹೆಣ್ಣು ಕೊಡುವುದಿಲ್ಲವೆಂದು 2 ನೇ ಪ್ರತಿವಾದಿ ಹೊಸ ಮನೆ ಕಟ್ಟಲು 2015 ರಲ್ಲಿ ಪ್ರಯತ್ನಿಸಿದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಮನೆಯನ್ನು ಕಟ್ಟಲು ಸಾಮಗ್ರಿಗಳನ್ನು ತರಲು 1 ನೇ ಪ್ರತಿವಾದಿ ಅಡ್ಡಿ ಪಡಿಸಿದರು ಎಂದರೆ ನನಗೆ ಗೊತ್ತಿಲ್ಲ. ಪಂಪ್ ಹೌಸ್ 10 ಇಂಟು 10 ಅಡಿ ಇರುತ್ತದೆ ಎಂದರೆ ಸರಿಯಲ್ಲ ದೊಡ್ಡದಾಗಿರುತ್ತದೆ. ಸದರಿ ಪಂಪ್ ಹೌಸ್ ನಲ್ಲಿ ಯಾವುದೇ ಸ್ನಾನದ ಗೃಹ ಮತ್ತು ಇತರ ಸೌಕರ್ಯಗಳು ಇರುವುದಿಲ್ಲ ಎಂದರೆ ಸರಿಯಲ್ಲ. 2 ನೇ

ಪ್ರತಿವಾದಿಯು ಅದೇ ಮನೆಯಲ್ಲಿ ಬದುಕಲಿ ಎಂಬ ಕಾರಣಕ್ಕೆ ನಾವು ಒಂದರ ನಂತರ ಮತ್ತೊಂದು ಸಲ್ಲಿಸಿ ಆತನಿಗೆ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಸಹೋದರ ಸಹೋದರಿಯರು 2 ನೇ ಪ್ರತಿವಾದಿಯ ಜೊತೆ ಯಾವ ಕಾಲಕ್ಕೂ ವಾಸ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಈಗಾಗಲೇ ವಿಭಾಗವಾಗಿದ್ದು ಸದರಿ ಸ್ವತ್ತುಗಳಲ್ಲಿ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಐಟಂ ನಂಬರ್ 3 ಸ್ವತ್ತಿನ ಖಾತೆ ನನ್ನ ತಂದೆ ಹೆಸರಿನಲ್ಲಿದೆ. ಸದರಿ ಸ್ವತ್ತಿನ ಕಂದಾಯವನ್ನು 1 ನೇ ಪ್ರತಿವಾದಿ ಪಾವತಿಸುತ್ತಿದ್ದಾರೆ. ದಾವಾ ಸ್ವತ್ತುಗಳು ನಮ್ಮ ಪಿತ್ರಾರ್ಜಿತ ಸ್ವತ್ತುಗಳು ಆಗಿರುತ್ತದೆ. ಈ ಸಂಬಂಧ ದಾಖಲಾತಿಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಗಳು ಬಂಗಾರಪೇಟೆ ಮುಖ್ಯ ರಸ್ತೆಗೆ ಬರುವ ಜಮೀನನ್ನು ಹಂಚಿಕೆ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಜಮೀನಿನ ಪಕ್ಕದಲ್ಲಿ ಸಾಕಾಷ್ಟು ಮನೆಗಳು ಕಟ್ಟಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿಯ ಪತ್ನಿ ಶಿಕ್ಷಕಿಯಾಗಿದ್ದರು. ಅವರು ಮುಳುಬಾಗಿಲು ಕಡೆ ಕೆಲಸ ಮಾಡುತ್ತಿದ್ದರು. 1 ಮತ್ತು 2 ನೇ ಪ್ರತಿವಾದಿಗಳು ನಮಗೆ ತಿಳಿಯದಂತೆ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿರತ್ತಾರೆ. ಈಗ ಮನೆಗಳು ಬರುವ ಜಾಗವನ್ನು ಅಮರಾವತಿ ಲೇಔಟ್ ಎಂದು ಕರೆಯುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿಯು ಸದರಿ ಜಮೀನಿನಲ್ಲಿ ಲೇಔಟ್ ಮಾಡಲು ಉದ್ದೇಶಿಸಿದ್ದು ಈ ರೀತಿ ಲೇಔಟ್ ಮಾಡಲು 2 ನೇ ಪ್ರತಿವಾದಿ ಮನೆ ಕಟ್ಟಿದ್ದಲ್ಲಿ ತೊಂದರೆಯಾಗುತ್ತದೆ ಎಂದು ನನ್ನ ಮುಖಾಂತರ ಈ ದಾವೆ ತಂದಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ವಾಣಿಜ್ಯ ಮಳಿಗೆ ಮತ್ತು ಮನೆಗಳನ್ನು ಮಾಡಲು ಉದ್ದೇಶಿಸಿದ್ದು ಇದಕ್ಕೆ 2 ನೇ ಪ್ರತಿವಾದಿ ಸದರಿ ಸ್ಥಳದಲ್ಲಿ ಇದ್ದಲ್ಲಿ ತೊಂದರೆಯಾಗುತ್ತದೆ ಎಂದು ನನ್ನ ಮುಖಾಂತರ ದಾವೆ ತಂದಿರುತ್ತಾರೆ ಎಂದರೆ ಸರಿಯಲ್ಲ.

1999 ರಿಂದ 2005 ರವರೆಗೂ ನಾನು ಮತ್ತು 1 ನೇ ಪ್ರತಿವಾದಿ ಚೆನ್ನಾಗಿ ಇದ್ದೆವು ಎಂದರೆ ಸರಿ. ನಾನು ಮತ್ತು ಸಹೋದರ ಮತ್ತು ಸಹೋದರಿಯರು 1999 ರಲ್ಲಿ ಆಗಿರುವ ವಿಭಾಗ ಪತ್ರವನ್ನು ರದ್ದುಗೊಳಿಸುವಂತೆ ಪ್ರಕರಣ ದಾಖಲಿಸಿಲ್ಲ ಎಂದರೆ ಸಾಕ್ಷಿ ತಮಗೆ ಆ ದಾಖಲಾತಿ ಬಗ್ಗೆ ತಿಳುವಳಿಕೆ ಇಲ್ಲ ಎಂದು ಉತ್ತರಿಸಿರುತ್ತಾರೆ. 2005

ರಿಂದ 2015 ರವರೆಗೆ ನಾವು ಈ ಪ್ರಕರಣವನ್ನು ಹೊರತುಪಡಿಸಿ ಬೇರೆ ಯಾವುದೇ ಪ್ರಕರಣ ಸಲ್ಲಿಸಿಲ್ಲ 2 ನೇ ಪ್ರತಿವಾದಿ ಸರ್ವೇನಂಬರ್ 94/1 ರಲ್ಲಿ 2020 ರಲ್ಲಿ ಒಂದು ಮನೆ ಕಟ್ಟಿರುತ್ತಾರೆ ಎಂದರೆ ಸರಿ. ಆ ನಂತರ ಅವರ ಮಗನಿಗೆ ಮದುವೆಯಾಗಿದೆ ಎಂದರೆ ಸರಿ. ನಾವು ಮತ್ತು 1 ನೇ ಪ್ರತಿವಾದಿ ಸೇರಿ 2 ನೇ ಪ್ರತಿವಾದಿಗೆ ತೊಂದರೆ ಕೊಡಲು ಈ ದಾವೆ ತಂದಿರುತ್ತೆವೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಸಹೋದರಿಯರು ಪಾಪಯ್ಯರವರ ಮಕ್ಕಳು ಎಂದು ತೋರಿಸಲು ಯಾವುದೇ ದಾಖಲಾತಿ ಕೊಟ್ಟಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**Sd/-**

**(ಕೇಶವಮೂರ್ತಿ.ಬಿ)**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,**

**ಬಂಗಾರಪೇಟೆ**